ಆ) ಬೀದರ್‌ನಲ್ಲಿ ಈಗಾಗಲೇ ನಾಗರೀಕ ವಿಮಾನ ಯಾನ ಸೇವೆಗಾಗಿ ಹೊಸ ಟರ್ಮಿನಲ್ ಕಟ್ಟಡವನ್ನು ನಿರ್ಮಿಸಲಾಗಿದೆ. ನಾಗರೀಕ ವಿಮಾನ ಯಾನ ಸೇವೆಯನ್ನು ಪ್ರಾರಂಭಿಸಲು ನಾಗರೀಕ ವಿಮಾನಯಾನ ಮಂತ್ರಾಲಯದಿಂದ ಅನುಮೋದನೆ ನಿರೀಕ್ಷಿಸಲಾಗುತ್ತಿದೆ.

ಇ) ಪ್ರಾರಂಭದಲ್ಲಿ ಭೂಸ್ವಾಧೀನಕ್ಕೆ ಕೆಲವು ಸಮಸ್ಯೆಗಳಿದ್ದವು. ಈ ವಿಷಯವನ್ನು ಸಾಧ್ಯವಾದ ಮಟ್ಟಿಗೆ ಇತ್ಯರ್ಥಗೊಳಿಸಿದೆ. ಶಿವಮೊಗ್ಗ, ಗುಲ್ಬರ್ಗಾ ಹಾಗೂ ಬಿಜಾಪುರಗಳಲ್ಲಿ ಕಾಮಗಾರಿ ಕೈಗೊಳ್ಳುವಲ್ಲಿ ಪಿಪಿಪಿ ಭಾಗೀದಾರರು ವಿಳಂಬ ಮಾಡಿದ್ದಾರೆ. ಈ ಬಗ್ಗೆ ಸತತ ಮನಗಾಣಿಕಾ ಕ್ರಮ ವಹಿಸಲಾಗಿದ್ದು, ಈಗ ಸದರಿಯವರು ಕಾಮಗಾರಿಯನ್ನು ಪ್ರಾರಂಭಿಸುವ ಹಂತದಲ್ಲಿದ್ದಾರೆ. ಬೀದರ್ ವಿಮಾನ ನಿಲ್ದಾಣದಲ್ಲಿ ವಿಮಾನ ಹಾರಾಟವನ್ನು ಪ್ರಾರಂಭಿಸಲು ನಾಗರೀಕ ವಿಮಾನಯಾನ ಮಂತ್ರಾಲಯದ ಅನುಮೋದನೆ ಯನ್ನು ರಾಜ್ಯ ಸರ್ಕಾರವು ನಿರೀಕ್ಷಿಸುತ್ತಿದೆ.

ಈ) ಬೀದರ್ ವಿಮಾನ ನಿಲ್ದಾಣದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನಾಗರೀಕ ವಿಮಾನಯಾನ ಮಂತ್ರಾಲಯಕ್ಕೆ ದಿನಾಂಕ: 19.05.2009 ರಲ್ಲಿ ಪತ್ರವನ್ನು ಬರೆದಿದೆ.

ಉ) ರಾಜ್ಯದಲ್ಲಿ ಗುಲ್ಬರ್ಗಾ, ಶಿವಮೊಗ್ಗ, ಬಿಜಾಪುರ ಹಾಗೂ ಹಾಸನ ನಿಲ್ದಾಣಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ತಾತ್ವಿಕ ಅನುಮೋದನೆಯನ್ನು ನೀಡಿರುತ್ತದೆ. ಈ ಮೇಲಿನ ವಿಮಾನ ನಿಲ್ದಾಣಗಳಿಗೆ ಅಗತ್ಯವಿರುವ ಜಮೀನನ್ನು ರಾಜ್ಯ ಸರ್ಕಾರವು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿದಾರರಿಗೆ ನೀಡುವ ಕ್ರಮ ವಹಿಸಲಾಗುತ್ತಿದೆ.

ಇಂಡಿಯಲ್ಲಿ ಪೊಲೀಸ್ ಪೆರೇಡ್ ಗ್ರೌಂಡ್‌ಗೆ ಕಾಂಪೌಂಡ್ ಗೋಡೆ ನಿರ್ಮಿಸುವುದು.

123 (416) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿಯಲ್ಲಿನ ಪೊಲೀಸ್ ಪೆರೇಡ್ ಗ್ರೌಂಡ್‌ಗೆ ಕಾಂಪೌಂಡ್ ಗೋಡೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಪೊಲೀಸ್ ಪೆರೇಡ್ ಜಾಗವನ್ನು ಸ್ವಚ್ಚತಾ ನಿರ್ವಹಣೆ ಕಾರ್ಯವನ್ನು ಯಾರಿಗೆ ವಹಿಸಲಾಗಿದೆ;

ಇ) ಈ ಪೊಲೀಸ್ ಪೆರೇಡ್ ಜಾಗಕ್ಕೆ ಕಾಂಪೌಂಡ್ ಗೋಡೆ ಕಟ್ಟುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಎಂದು ಕೈಗೊಳ್ಳ ಲಾಗುವುದು?

ಶ್ರೀ ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಇಲ್ಲ.

ಆ) ಫ್ಯಾಟಿಗ್ ಡ್ಯೂಟಿ ಮೂಲಕ (Fatigue Duty) (ಇಲಾಖೆಯಲ್ಲಿನ ವಿವಿಧ ಗುಂಪಿನ ಸಿಬ್ಬಂದಿಗಳಿಂದ ಶ್ರಮದಾನದ ಮೂಲಕ) ಸ್ವಚ್ಚತಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಇ) ಸದ್ಯಕ್ಕೆ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ದೇವಸ್ಥಾನಗಳ ಅಭಿವೃದ್ಧಿ

124 (417) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಗೃಹ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ವಿಧಾನಸಭಾ ಕ್ಷೇತ್ರದಲ್ಲಿ ಮುಜರಾಯಿ ಇಲಾಖೆಯಲ್ಲಿ ನೋಂದಣಿಯಾದ ದೇವಸ್ಥಾನಗಳು ಎಷ್ಟು ; ಅವು ಯಾವುವು;

ಆ) ದಿನಾಂಕ: 01-06-2008 ರಿಂದ ದಿನಾಂಕ: 31.12.2009ರ ಅವಧಿಯಲ್ಲಿ ಇಂಡಿ ವಿಧಾನಸಭಾ ಕ್ಷೇತ್ರದ ಯಾವ ಯಾವ ದೇವಸ್ಥಾನಗಳ ಸುಧಾರಣೆ ಕೈಗೊಳ್ಳಲಾಗಿದೆ ಮತ್ತು ಈ ಪ್ರತಿಯೊಂದು ದೇವಸ್ಥಾನದ ಸುಧಾರಣೆಗಾಗಿ ಖರ್ಚಾದ ಹಣವೆಷ್ಟು;

ಇ) 2010-2011 ರ ಸಾಲಿನಲ್ಲಿ ಯಾವ ಯಾವ ದೇವಸ್ಥಾನಗಳ ಸುಧಾರಣೆ ಕೈಗೊಳ್ಳುವ ಯೋಜನೆ ಸರ್ಕಾರದ ಮುಂದಿದೆ;

ಈ) ಇದಕ್ಕೆ ನಿಗದಿಯಾದ ಹಣವೆಷ್ಟು (ಇಂಡಿ ವಿಧಾನಸಭಾ ಕ್ಷೇತ್ರದ ಮಾಹಿತಿ ನೀಡುವುದು)?